## ನಗು ನಗುತ್ತಾ ಇರೋಣ

‘ಓ ನನ್ನ ಚೇತನ, ಆಗು ನೀ ನಗೆಕೇತನ’ (ಏ. 04) ‘ನಗೆ ಸಂಚಿಕೆ’ಯ ವಿಶೇಷ ಬರಹಗಳು ಅದ್ಭುತವಾಗಿ ಮೂಡಿಬಂದಿವೆ. ಕೆಲಸದ ಒತ್ತಡ, ಸಾಮಾಜಿಕ ಜಾಲತಾಣಗಳು, ಸಾಮರಸ್ಯದ ಕೊರತೆ ಇನ್ನೂ ಅನೇಕ ಕಾರಣಗಳಿಂದ ಜನರು ನಗುವನ್ನೇ ಮರೆತಿರುವ ಈ ಕಾಲಘಟ್ಟದಲ್ಲಿ ನಗುವಂತೆ ಮಾಡಿವೆ ಲೇಖನಗಳು. ಯಾವಾಗಲೂ ನಗುನಗುತ್ತಾ ಇರೋಣ...



—ವಿಜಯ್ ಹಂಚಿನಾಳ, ಇಳಕಲ್ಲ

## ನಗೆಯ ತಂಪೆರೆಯಿತು

‘ಸುಧಾ’ ನಗೆ ಸಂಚಿಕೆ ನೋಡುತ್ತಿದ್ದಂತೆ ಕಾತರ, ಕುತೂಹಲದಿಂದ ಓದಲು ಶುರು ಮಾಡಿದೆ. ‘ಓ ನನ್ನ ಚೇತನ ಆಗು ನೀ ನಗೆಕೇತನ’ ಎಂಬ ಶೀರ್ಷಿಕೆಯೇ ಬಹಳ ಸೊಗಸಾಗಿದೆ. ಎಂ.ಎಸ್. ನರಸಿಂಹಮೂರ್ತಿಯವರ ‘ಸ್ನಾನಾಯ ತಸ್ಮೈ ನಮಃ’, ಗುಂಡುರಾವ್ ದೇಸಾಯಿಯವರ ‘ಯಾರ್‍ರೀ ಅವಳು...?’. ಪ್ರಭಾಮಣಿ ನಾಗರಾಜ ಅವರ ‘ಎಡವಟ್ಟೋ ಎಡವಟ್ಟು’ ನಗೆ ವಿಶೇಷ ಲೇಖನಗಳು ಒಂದಕ್ಕಿಂತ ಒಂದು ಚೆನ್ನಾಗಿದ್ದವು, ನಗೆಯ ತಂಪೆರೆದವು.

—ಚಿದಂಬರ, ತುಮಕೂರು



## ನಕ್ಕುಬಿಡಿ ಸುಮ್ಮನೆ...

‘ನಗೆ ದಿನ’ಕ್ಕಾಗಿ ‘ಸುಧಾ’ ನೀಡಿದ ಎಲ್ಲಾ ಬರಹಗಳು ತುಂಬಾ ಚೆನ್ನಾಗಿವೆ. ‘ಸ್ನಾನಾಯ ತಸ್ಮೈ ನಮಃ’, ‘ಯಾರ್‍ರೀ ಅವಳು...?’, ‘ಎಡವಟ್ಟೋ ಎಡವಟ್ಟು’, ‘ರಾಂಗ್ ನಂಬರ್’ ಈ ಎಲ್ಲಾ ಲೇಖನಗಳು ನಗುವಂತೆ ಮಾಡಿದವು. ‘ನಸುನಗೆ’ಯಲ್ಲಿ ಮೂಡಿಬಂದ ನಾಗನಾಥ್ ಗೌರೀಪುರ ಹಾಗೂ ನಂಜುಂಡಸ್ವಾಮಿ ಅವರ ಕಾರ್ಟೂನ್‌ಗಳೂ ಬಹಳ ಚೆನ್ನಾಗಿವೆ. ಪ್ರತಿ ಬಾರಿಯಂತೆ ಈ ಬಾರಿಯೂ ‘ನಕ್ಕುಬಿಡಿ’ ಅಂಕಣ ಖುಷಿಕೊಟ್ಟಿತು. ನಗಲು ಚಿಂತೆಯೇಕೆ? ನಕ್ಕುಬಿಡಿ ಮನಬಿಚ್ಚಿ ಎಂಬಂತೆ ಇತ್ತು ‘ಸುಧಾ’ ನಗೆ ಸಂಚಿಕೆ...



—ಅಮೃತವರ್ಷಿಣಿ, ಹಾಸನ

## ದಿವ್ಯ ಸಂದೇಶ

‘ಶ್ರೇಷ್ಠರು’ (ಏ. 04, ಜಯಂತಿ ರಾಘವೇಂದ್ರ, ಆಗುಂಬೆ) ‘ಎಳೆಯರ ಅಂಗಳ’ದಲ್ಲಿ ಪ್ರಕಟವಾಗಿರುವ ಕಥೆಯಲ್ಲಿ ಸೂಜಿ ಮತ್ತು ಕತ್ತರಿ ನಡುವಿನ ವಾಗ್ವಾದ ತುಂಬಾ ಚೆನ್ನಾಗಿದೆ. ಕನಕದಾಸರ ‘ರಾಮಧಾನ್ಯ ಚರಿತೆ’ಯಲ್ಲಿ ಬರುವ ಭತ್ತ ಮತ್ತು ರಾಗಿ ನಡುವಿನ ವಾಗ್ವಾದವನ್ನು ನೆನಪಿಸಿತು. ಪ್ರತಿಯೊಬ್ಬರನ್ನು ಗೌರವಿಸುವ ಶ್ರೇಷ್ಠ ಗುಣವನ್ನೂ ಬೆಳೆಸಿಕೊಳ್ಳಬೇಕು ಎಂಬ ದಿವ್ಯ ಸಂದೇಶ ನೀಡಿರುವುದು ಮನೋಜ್ಞವಾಗಿದೆ.

— ಗಾಯತ್ರಿ ವೆಂಕಟೇಶ್, ಮೈಸೂರು

## ಮಾನವೀಯತೆಯ ಮೆರುಗು

ಏಪ್ರಿಲ್ 4ರ ಹಾಸ್ಯ ಸಂಚಿಕೆ ನನ್ನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಪ್ರತಿ ಪುಟ ಓದುತ್ತಾ ಹೋದಂತೆ ‘ನಿಮ್ಮ ಪುಟ’ ಗಮನಿಸಿದೆ. ಬಿಸಿಲನಾಡು ಎಂದು ಕರೆಸಿಕೊಳ್ಳುವ ಬಳ್ಳಾರಿಯ ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಪ್ರಾಣಿ ಪಕ್ಷಿಗಳಿಗೆಂದು ಮರಗಳಿಗೆ ಪ್ಲಾಸ್ಟಿಕ್ ಬಾಟಲಿಯಲ್ಲಿ ನೀರು ಹಾಗೂ ಕಾಂಪೌಂಡ್ ಮೇಲೆ ಹಿಡಿ ಅನ್ನವನ್ನಿಟ್ಟ ಸಂಗತಿ ಗಮನಸೆಳೆಯಿತು. ಈ ಸೇವೆ ಮಾಡುತ್ತಿರುವ ವ್ಯಕ್ತಿಗೆ, ಆತನ ಮಾನವೀಯ ಗುಣಕ್ಕೆ ನನ್ನದೊಂದು ನಮಸ್ಕಾರ ಹೇಳಲು ಮನಸ್ಸು ಬಯಸಿತು.

—ಅನುರಾಧ ಟಿ., ದಾವಣಗೆರೆ

## ಅಚ್ಚರಿ ತಂದ ‘ಜಾಣಕಾಗೆ’



‘ಜಾಣಕಾಗೆ 2024’ (ಏ. 04, ವಿಶ್ವನಾಥ ಸುವರ್ಣ) ಚಿತ್ರಪಟ ಕಥನ ಬಹಳ ಸೊಗಸಾಗಿದೆ. ಬುದ್ಧಿವಂತ ಕಾಗೆಯ ಪರಂಪರೆ ಮುಂದುವರೆದಿರುವುದಂತೂ ನಿಜ. ಚಿತ್ರಗಳನ್ನು ನೋಡಿ ನಸುನಗು ಮೂಡಿತು.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

ನಗೆ ವಿಶೇಷದ ‘ಸುಧಾ’ ಸಂಚಿಕೆ ತುಂಬಾ ಚೆನ್ನಾಗಿದೆ. ನಗೆ ಲೇಖನಗಳೊಂದಿಗೆ ವಿಶೇಷವಾಗಿ ಮೂಡಿಬಂದ ‘ಜಾಣಕಾಗೆ 2024’ ಅಚ್ಚರಿ ತಂದಿತು.

—ಅನುರಾಧ ಎನ್.ಪಿ.,ಬೆಂಗಳೂರು

## ಮತ್ತಷ್ಟು ಸಾಧನೆಯಾಗಲಿ

‘ಭಲೇ ಕನ್ನಡತಿ’ (ಏ. 04, ಪ್ರಮೋದ) ‘ಕ್ರೀಡಾ ಲೇಖನ’ ಓದಿ ಖುಷಿಯಾಯಿತು. ಶ್ರೇಯಾಂಕಾ ಪಾಟೀಲ ಎಂಬ ಈ ಹುಡುಗಿ ಈ ಸಲದ ಮಹಿಳಾ ಕ್ರಿಕೆಟ್ ಲೀಗ್‌ನಲ್ಲಿ ತೋರಿದ ಸಾಧನೆ ಶ್ಲಾಘನೀಯ. ಅತ್ಯುತ್ತಮ ಬೌಲಿಂಗ್ ಪ್ರದರ್ಶಿಸಿ ಫೈನಲ್ ಪಂದ್ಯದಲ್ಲಿ 4 ವಿಕೆಟ್ ಗಳಿಸಿದ್ದು ಹಾಗೂ ಪ್ರತಿ ವಿಕೆಟ್ ಪಡೆದ ನಂತರ ಅವರು ಸಂಭ್ರಮಿಸಿದ್ದು ನೋಡಿ ನನಗೂ ಸಂತಸವಾಯಿತು. ಈ ಪ್ರತಿಭೆಗಳಿಂದ ಇನ್ನಷ್ಟು, ಮತ್ತಷ್ಟು ಸಾಧನೆಯಾಗಲಿ, ನಮ್ಮ ದೇಶಕ್ಕೆ ಹೆಮ್ಮೆ ತರಲಿ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ನೈಜ ಚಿತ್ರಣದ ಕಥೆ

‘ವೈಕುಂಠದ ದಾರಿಯಲ್ಲಿ’ (ಏ. 04, ಕೆ.ಆರ್. ಸ್ವಾಮಿ) ಅಪ್ಪ ಅಮ್ಮಂದಿರಿಂದ ದೂರವಾಗಿ ವಿದೇಶಕ್ಕೆ ಹಾರಿರುವ ಮಕ್ಕಳ ನಡವಳಿಕೆಯ ಮತ್ತು ನೈಜ ಚಿತ್ರಣದ ಕಥೆ. ಇದ್ದಾಗ ಪ್ರೀತಿ ತೋರದೇ, ಅಪ್ಪ ಅಮ್ಮ ಗತಿಸಿದ ನಂತರ ಅಲ್ಲಿಂದ ಹಾರಿಕೊಂಡು ಬಂದು ಆಸ್ತಿಗಾಗಿ ಹೋರಾಡಿದ ಘಟನೆಗಳನ್ನು ನೋಡಿ, ಕೇಳಿದ್ದ ನನಗೆ ಮತ್ತೊಮ್ಮೆ ಎಲ್ಲಾ ಕಣ್ಣ ಮುಂದೆ ಬಂದಂತಾಯಿತು. ಕಥೆ ಓದಿ ಕಣ್ಣು ಮಂಜಾಯಿತು.

—ಶಾಂತಾ ನಾಗರಾಜ್

## ಕಟು ವಾಸ್ತವ

ಸಮಾಜದ ವಾಸ್ತವ ಬದುಕಿಗೆ ಹಿಡಿದ ಕನ್ನಡಿಯಂತಿದೆ ಕಥೆ. ಓದಿ ಕೆಲಸಕ್ಕೆ ಸೇರಿದ ನಂತರ ಸ್ವಾರ್ಥಿಗಳಾಗಿ ತಮ್ಮ ತಂದೆ ತಾಯಿಯರನ್ನು ನಿರ್ಲಕ್ಷಿಸುವ ಮಕ್ಕಳು, ಅಪ್ಪ ಅಮ್ಮ ಸತ್ತ ನಂತರ ಲಕ್ಷಗಟ್ಟಲೆ ಹಣ ಹಾಕಿ



ಅಂತ್ಯಸಂಸ್ಕಾರ ಮಾಡಿ ಪುಣ್ಯ ಕಟ್ಟಿಕೊಳ್ಳುವ ಕೆಲಸಕ್ಕೆ ಮುಂದಾಗುವುದು ದುರಂತ. ಇದೇ ಸಮಾಜದ ಕಟುವಾಸ್ತವ.

—ಎನ್. ನಟರಾಜ, ಬೆಂಗಳೂರು

## ಸರಿಯಾದ ನಿರ್ಧಾರ

ಕಥೆಗಾರನ ನಿರ್ಧಾರ ಸರಿಯಿದೆ. ತಂದೆ ಬದುಕಿರುವವರೆಗೂ ನಿಸ್ವಾರ್ಥದಿಂದ ನೋಡಿಕೊಂಡವನಿಗೆ ಯಾವ ಪಾಪವೂ ತಟ್ಟುವುದಿಲ್ಲ. ಅವನ ಅಣ್ಣಂದಿರಂಥ ಮಕ್ಕಳು ಇರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

—ಜ್ಯೋತಿ ಉಮೇಶ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in